ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಶ್ರೀ. ಪಿ. ಎಮ್. ವಕೀಲರಿಂದ ಪ್ರತಿವಾದಿಯರ ಪರವಾಗಿ

11. 4-5 ವರ್ಷಗಳಿಂದ ಪ್ರತಿವಾದಿಯವರು ನನಗೆ ಪರಿಚಯ. 2-3 ವರ್ಷಗಳಿಂದ ನಾನು ಹಾಗೂ ಪ್ರತಿವಾದಿ ಹಣಕಾಸಿನ ವ್ಯವಹಾರ ಹೊಂದಿರುತ್ತೇವೆ. ಆ ರೀತಿ ಹಣಕಾಸಿನ ವ್ಯವಹಾರದಲ್ಲಿ ಪ್ರತಿವಾದಿಯವರು ನನ್ನಿಂದ ಹಣ ಪಡೆದು ಮರು ಪಾವತಿ ಮಾಡುತ್ತಿದ್ದರು ಎಂದರೆ ಸರಿ. ಸುಮಾರು ಎರಡು ವರ್ಷಗಳಿಂದ ದಾವಾ ಆಸ್ತಿಗೆ ಬೇಟಿ ನೀಡಿರುತ್ತೇನೆ. ದಾವಾ ಆಸ್ತಿಯಲ್ಲಿ ಮನೆ, ಗೇಟು ಮತ್ತು ಟ್ರಾನ್ಸ್ ಪಾರ್ಮರ್ ಹಾಗೂ ಬೆಲಿ ಇದೆ. ಅದನ್ನು ಹೊರತು ಪಡಿಸಿ ಬೇರೆ ಏನು ಇರುವುದಿಲ್ಲ. ದಾವಾ ಆಸ್ತಿ ಮಾರಾಟಕ್ಕೆ ಇದೆ ಎಂದು ಪ್ರತಿವಾದಿಯವರು ತಿಳಿಸಿರುತ್ತಾರೆ.

12. ನಿಪಿ 1 ರ ದಾಖಲಾತಿಯನ್ನು ಮಾಡಿಕೊಳ್ಳುವ ಪೂರ್ವದಲ್ಲಿ ಜಾಗದ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಗಳ ಮೇಲೆ ವಕೀಲರ ಅಭಿಪ್ರಾಯ ಪಡೆದಿರುತ್ತೇನೆ. ದಾವಾ ಆಸ್ತಿಯ ಮೇಲೆ ಸಾಲ ಇದೆ ಎಂದು ವಕೀಲರು ತಿಳಿಸಿರುವುದಿಲ್ಲ. ದಾವಾ ಆಸ್ತಿ ಭೂ ಪರಿವರ್ತನೆಯಾದ ಜಮೀನು ಎಂದರೆ ಸರಿ. ಆದ್ದರಿಂದ ನಮೂನೇ 9 ಮತ್ತು 11 ರ ದಾಖಲಾತಿಗಳು ಆಗಿದ್ದವು. ಆದ್ದರಿಂದ ಕ್ರಯ ಪತ್ರ ಮಾಡಿಕೊಳ್ಳಲು ಯಾವುದೇ ಸಮಸ್ಯೆ ಇಲ್ಲ ಎಂದರೆ ಸರಿ. ಸಂಪೂರ್ಣ ಹಣವನ್ನು ನಿಪಿ 1 ರಲ್ಲಿ ಪಾವತಿ ಮಾಡಿದ್ದರು, ಕ್ರಯ ಪತ್ರ ಮಾಡಿಕೊಳ್ಳಲು ನನಗೆ ತೊಂದರೆ ಇರಲಿಲ್ಲ, ಆದರೆ ಪ್ರತಿವಾದಿಗೆ ತೊಂದರೆ ಇತ್ತು. ನಿಪಿ 1 ನ್ನು ಪ್ರತಿವಾದಿಯವರೇ ತಯಾರಿಸಿರುತ್ತಾರೆ. ದಿನಾಂಕಃ 13.09.2024 ರಂದು ಸದರಿ ದಾಖಲಾತಿಯನ್ನು ತಯಾರಿಸಲಾಗಿದೆ, ಆದರೆ ಸದರಿ ವಕೀಲರ ಹೆಸರು ನನಗೆ ಗೊತ್ತಿಲ್ಲ. ನಾನು ಸದರಿ ವಕೀಲರನ್ನು ಬೇಟಿ ಮಾಡಿರುವುದಿಲ್ಲ. ನನ್ನ ಅಂಗಡಿಗೆ ನಿಪಿ 1 ನ್ನು ತೆಗೆದುಕೊಂಡು ಬಂದು ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ಪ್ರತಿವಾದಿಯ ಸ್ನೇಹಿತರು ಒಬ್ಬರು ಇದ್ದರು. ಅವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಸದರಿ ಸ್ನೇಹಿತನ ಹೆಸರು ನನಗೆ ಗೊತ್ತಿಲ್ಲ.

13. ನಾನು ಪ್ರತಿವಾದಿಯ ಮನೆಯ ಹೊರಗೆ ಎರಡು ಬಾರಿ ಹೋಗಿರುತ್ತೇನೆ. ನಿಪಿ 1 ಆದ ನಂತರ ಪ್ರತಿವಾದಿಯವರ ಮನೆಗೆ ಬೇಟಿ ನೀಡಿ ಕ್ರಯ ಪತ್ರ ಮಾಡಿಕೊಡುವಂತೆ ಕೇಳಿಕೊಂಡಿರುವುದಿಲ್ಲ, ಆದರೆ ಪೋನ್ ನಲ್ಲಿ ಕೇಳಿರುತ್ತೇನೆ.

ಕರಾರು ಪತ್ರವನ್ನು ಒಂದೇ ಪ್ರತಿಯಲ್ಲಿ ಮಾಡಿಕೊಂಡು ಬಂದು, ಅದನ್ನು ನನಗೆ ನೀಡಿರುತ್ತಾರೆ. ನಿಪಿ 1 ಕ್ಕೆ ನಾನು ಮತ್ತು ಪ್ರತಿವಾದಿ ಮಾತ್ರ ಸಹಿ ಮಾಡಿರುತ್ತೇವೆ. ಸಾಕ್ಷಿ ಮುಂದುವರೆದು ಸಾಕ್ಷಿಗಳು ಸಹಃ ಸಹಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿದಾರರ ಹೆಸರು, ವಿಳಾಸವನ್ನುಕೈಯಲ್ಲಿ ಬರೆಯಲಾಗಿತ್ತು, ಉಳಿಕೆ ಬರವಣಿಗೆ ಬೆರಳಚ್ಚು ಮಾಡಲಾಗಿತ್ತು. ಸಾಕ್ಷಿದಾರರ ಹೆಸರು ರಿತೇಶ ಬಂಡಾರಿ ಹಾಗೂ ರವಳನಾಥ ಪ್ರಭು, ಅವರು ನನ್ನ ಸ್ನೇಹಿತರು.

14. ನಿಪಿ 2 ಕ್ಕೆ ಪ್ರತಿವಾದಿಯವರು ನಿಪಿ 5 ರಂತೆ ಉತ್ತರ ನೀಡಿರುತ್ತಾರೆ ಎಂದರೆ ಸರಿ. ನಿಪಿ 5 ರಲ್ಲಿ ಬರೆದಿರುವ ಎಲ್ಲಾ ವಿಚಾರ ಸತ್ಯ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮನೆ ಆರ್.ಸಿ.ಸಿ. ಮನೆ. ಆದರೆ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಗುರುವಾಯನಕೆರೆ - ಉಡುಪಿ ರಾಷ್ಟ್ರೀಯ ಹೆದ್ದಾರಿಯಿಂದ 1 ಕೀ.ಮೀ. ಒಳಗೆ ಇದೆ. ದಾವಾ ಆಸ್ತಿಯಿಂದ ಗುರುವಾಯನಕೆರೆ ಪೇಟೆಗೂ ಸಹಃ ಅಷ್ಟೇ ಅಂತರ ಇದೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ